**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.  2460/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಅಮಾನ್ | ಸಿ.ಡಬ್ಲ್ಯೂ-06 |
| ತಂದೆಯ ಹೆಸರು | : | ಹುಸೇನ್ ಸಾಬ್ | ಪಿ.ಡಬ್ಲ್ಯೂ-08 |
| ವಯಸ್ಸು | : | 31 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಗೌರಸಮುದ್ರ ಕಾವಲ್ | ದಿಃ 04-03-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ನನಗೆ ಆರೋಪಿಯ ಪರಿಚಯ ಇರುತ್ತದೆ.  ಆರೋಪಿಯು ಈಗ್ಗೆ 1 ವರ್ಷಗಳ ಹಿಂದೆ ಪರಿಚಯವಾಗಿರುತ್ತದೆ. ಆರೋಪಿಯು ನನ್ನ ಬಳಿ ಎರಡು ಬೈಕ್ ಗಳನ್ನು ಅಡ ಇಟ್ಟಿದ್ದ. ಆರೋಪಿಯು  ಇಸ್ಪೀಟ್ ಜೂಜಾಟ ಆಡಿ  ಹಣವಿಲ್ಲದೇ ಎರಡು ಬೈಕ್ ಗಳನ್ನು ನನ್ನ ಬಳಿ ಅಡ ಇಟ್ಟು  ರೂ. 5000/- ಹಾಗೂ 8000/- ಹಣವನ್ನು ಪಡೆದಿರುತ್ತಾರೆ.

ದಿನಾಂಕ 05.10.2025 ರಂದು ಪೊಲೀಸರು ನನಗೆ ನೋಟೀಸ್ ನೀಡಿರುತ್ತಾರೆ. ನೋಟೀಸ್ ನಲ್ಲಿ ಕೆಎ-16 ಇವಿ-1269 ಬಜಾಜ್ ಬೈಕ್ ಹಾಗೂ ನೊಂದಣಿ ಸಂಖ್ಯೆ ಇಲ್ಲದ ಸ್ಪ್ಲೆಂಡರ್ ಬೈಕ್ ಕಳ್ಳತನ ಮಾಡಿದ ಬೈಕ್ ಎಂದು ತಿಳಿಸಿ ಸದರಿ ಬೈಕುಗಳನ್ನು ತಮ್ಮ ವಶಕ್ಕೆ ನೀಡುವಂತೆ ಕೇಳಿರುತ್ತಾರೆ.  ದಿನಾಂಕ 08.10.2025 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ಬೈಕ್ ಗಳನ್ನು ಪೊಲೀಸರ ವಶಕ್ಕೆ ನೀಡಿರುತ್ತೇನೆ.  ಆ ಸಮಯದಲ್ಲಿ ಪೊಲೀಸರು  ಹಾಗೂ ಆರೋಪಿಯು ಇದ್ದು ಮಹಜರ್ ಕ್ರಮ ಜರುಗಿಸಿರುತ್ತಾರೆ.

ಸಾಕ್ಷಿಗೆ ನಿಪಿ.7  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 7(ಡಿ) ಅಂತ ಗುರುತಿಸಲಾಯಿತು.

ಸಾಕ್ಷಿಯು ನಿಪಿ.5 ರಲ್ಲಿರುವ ಬೈಕನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಇನ್ನೊಂದು ಬೈಕನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ.

ಸಾಕ್ಷಿಯ ವಿ ಸಿ ಮೂಲಕ ಹಾಜರು ಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈ ಬಗ್ಗೆ  ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀಮತಿ ಬಿ.ಜಿ., ಆರೋಪಿ ಪರ ವಕೀಲರಿಂದಃ**

ನಾನು ಚಾಲಕನಾಗಿರುತ್ತೇನೆ. ನನಗೆ ದಿನಕ್ಕೆ 500/- ರೂ ಕೂಲಿ ಸಿಗುತ್ತದೆ. ಆರೋಪಿಯು ಪೊಲೀಸರು ನೋಟೀಸ್ ನೀಡುವ ಒಂದು ತಿಂಗಳ ಮುಂಚೆ ಬೈಕನ್ನು ಅಡಮಾನ ಇಟ್ಟಿದ್ದರು. ಸದರಿ ದಿನಾಂಕ ತಿಂಗಳು ಹೇಳಲು ಆಗುವುದಿಲ್ಲ. ಆರೋಪಿಯು ಬೈಕನ್ನು ಅಡ ಮಾನ ಇಡುವಾಗ ದಾಖಲೆಗಳನ್ನು ಪರಿಶೀಲಿಸಲಾಗಿದೆಯೇ ಎಂದರೆ ಸಾಕ್ಷಿಯು ಆರೋಪಿಯು 8-10 ದಿನಗಳ ನಂತರ ದಾಖಲೆ ನೀಡುವುದಾಗಿ ಹೇಳಿರುತ್ತಾನೆ ಎಂದು ಹೇಳಿರುತ್ತಾರೆ. ಆರೋಪಿಯು ಬಾಯಿ ಮಾತಿನಲ್ಲಿ ಬೈಕುಗಳು ತನಗೆ ಸೇರಿರುತ್ತದೆ ಎಂದು ಹೇಳಿದ್ದರಿಂದ ನಾನು ದಾಖಲೆಯನ್ನು ನೋಡಿರುವುದಿಲ್ಲ. ಬಜಾಜ್ ಬೈಕನ್ನು ನಾನು ರೂ.8000/- ಮೊತ್ತಕ್ಕೆ ಅಡಮಾನ ಇರಿಸಿಕೊಂಡಿದ್ದೆ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ನೀಡಿದ್ದೆ. 500/- ರೂ ಮುಖ ಬೆಲೆಯ ನೋಟುಗಳನ್ನು ನೀಡಿದ್ದೆ. ಬೈಕನ್ನು ಅಡಮಾನ ಇಟ್ಟುಕೊಳ್ಳುವಾಗ ಆರೋಪಿಯನ್ನು ಹೆಸರು ವಿಳಾಸ ಕೇಳಿರುತ್ತೇನೆ. ಆರೋಪಿ ಬಳಿಯಿಂದ ಎರಡು ಬೈಕ್ ಗಳನ್ನು ಅಡಮಾನ ಇರಿಸಿಕೊಂಡಿದ್ದೆ. ಆರೋಪಿಯು ಸ್ವ -ಇಚ್ಛಾ ಹೇಳಿಕೆಯಲ್ಲಿ ಮೂರು ಬೈಕ್ ಗಳನ್ನು ಮಾರಾಟ ಮಾಡಿರುವುದಾಗಿ ಹೇಳಿರುತ್ತಾನೆ ಎಂದರೆ ಸಾಕ್ಷಿಯ ಎರಡು ಬೈಕ್ ಗಳು ಮಾತ್ರ ಎಂದು ನುಡಿಯುತ್ತಾರೆ. ನಾನು ಠಾಣೆಗೆ ಬೈಕನ್ನು ಹಾಜರು ಪಡಿಸುವಾಗ ಸಮಯ 11-30 ರಿಂದ 12-00 ಗಂಟೆ ಆಗಿದ್ದು, ಪೊಲೀಸರು ಹಾಗೂ ಆರೋಪಿಯು ಹಾಜರಿದ್ದರು. ಆರೋಪಿಯನ್ನು ಮೊದಲ ಬಾರಿ ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಎರಡು ಬೈಕುಗಳನ್ನು ನಾನು ಮತ್ತು ನನ್ನ ಸ್ನೇಹಿತ ಠಾಣೆಗೆ ತಂದಿರುತ್ತೇವೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಸ್ನೇಹಿತ ಠಾಣೆಯ ಒಳಗೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಇಸ್ಪೀಟ್ ಜೂಜಾಟದ ಸಲುವಾಗಿ ಬೈಕ್ ಗಳನ್ನು ಅಡಮಾನ ಇಟ್ಟಿರುವುದಾಗಿ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.5 ರಲ್ಲಿ ಕಾಣುವ ವಾಹನದ ನೊಂದಣಿ ಸಂಖ್ಯೆ ಕೆಎ 16 ಇಎನ್ -1269 ಆಗಿರುತ್ತದೆ. ಆರೋಪಿಯು ನನ್ನ ಬಳಿ ಯಾವವುದೇ ಬೈಕನ್ನು ಅಡಮಾನ ಇರಿಸದೇ ಇದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲಿಲ ಅಡಮಾನ ಇರಿಸಿದ್ದ ಬೈಕುಗಳು ಕಳ್ಳತನವಾದ ಬೈಕುಗಳು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು

ಮುಂದುವರಿದು ನೋಟೀಸ್ ಬಂದ ನಂತರವೇ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.



ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಪೊಲೀಸರೊಂದಿಗೆ ಷರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ